ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

12

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 1-12-2020

# ಐಹೊಳೆ ಬೆಳಗ್ಗೆ ಅಂಬೇಡ್ಕರ್ ನಿಗಮಕ್ಕೆ ಸಂಜೆ ಆದಿಜಾಂಬವ ನಿಗಮ ಅಧ್ಯಕ್ಷ!

■ **ವಿಕ ಸುದ್ದಿಲೋಕ** ಬೆಳಗಾವಿ 01/12/20

ಶಾಸಕ ದುರ್ಯೋಧನ ಐಹೊಳೆ ಬೆಳಗ್ಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮ ಅಧ್ಯಕ್ಷ ಸಂಜೆ ಆದಿಜಾಂಬವ ನಿಗಮಕ್ಕೆ ಅಧ್ಯಕ್ಷ.

ಪಾಂಡವರು ರಾಜ್ಯಕ್ಕಾಗಿ ಅಲೆದಾಡಿದಂತೆ ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಅವರ ಪಾಡು ಸಹ ಅದಲ್ಲ ಇದು; ಇದಲ್ಲ ಅದು ಎನ್ನುವಂತಾಗಿ ಈಗ ಕರ್ನಾಟಕ ಆದಿಜಾಂಬವ ನಿಗಮಕ್ಕೆ ಬಂದು ಮುಟ್ಟಿದೆ.

ಅಂಬೇಡ್ಕರ್ ಅಭಿವೃದ್ಧಿ ನಿಗಮವನ್ನು ಹಠಮಾಡಿ ಪಡೆದು ಸೋಮವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನಲ್ಲಿ ಅಧಿಕಾರ ಸ್ವೀಕರಿಸಿದ್ದ ಶಾಸಕ ದುರ್ಯೋಧನ ಐಹೊಳೆಗೆ ಕೆಲವೇ ಗಂಟೆಯಲ್ಲಿ ಹುದ್ದೆ ಬದಲಾಯಿಸಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಆದೇಶ ಮಾಡಿದ್ದಾರೆ.



ಒಂದೇ ದಿನ ಎರಡೆರಡು ನಿಗಮದ ಅಧ್ಯಕ್ಷರಾಗಿ ಐಹೊಳೆ ಅವರು ಅಧಿಕಾರಿಗಳಿಂದ ಶುಭಾಶಯ ಗಿಟ್ಟಿಸಿಕೊಂಡಿದ್ದಾರೆ. ಈ ಪ್ರಸಂಗ ಜಿಲ್ಲೆಯಲ್ಲಿ ಸ್ವಾರಸ್ಯಕರ ಚರ್ಚೆಗೂ ಅವಕಾಶ ಒದಗಿಸಿದೆ.

ಆರಂಭದಲ್ಲಿ ಖಾದಿ ಗ್ರಾಮೋದ್ಯೋಗ ಅಭಿವೃದ್ಧಿ ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಆ ಹುದ್ದೆಯನ್ನು ತಿರಸ್ಕರಿಸಿ, ಅಂಬೇಡ್ಕರ್ ನಿಗಮವೇ ಬೇಕು ಎಂದು ಹಠ ಹಿಡಿದು ಪಡೆದುಕೊಂಡಿದ್ದರು. ಬದಲಾದ ಸನ್ನಿವೇಶದಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮವನ್ನು ಬೆಂಗಳೂರಿನ ಆರ್.ಟಿ. ನಗರದ ಸಿ. ಮುನಿಕೃಷ್ಣ ಅವರಿಗೆ ನೀಡಿ ಸಿಎಂ ಆದೇಶ ಮಾಡಿದ್ದಾರೆ.